ಮೆರುಗು ಕೊಟ್ಟಿತ್ತು.

"ಅದ್ಯಾಕೆ ಹಾಗೆ ನೋಡ್ತಿದೀರಾ?" ಕೇಳಿದ್ದಳು ನಳಿನಿ.

"ಹೊಸಬಿ ಹಾಗೆ ಕಾಣ್ತೆದ್ದಿ, ಈ ಬೆಳದಿಂಗಳಲ್ಲಿ..." ಸತ್ಯ ಹೇಳಿದ್ದ ಅನಂತ.

"ಹೊಸಬೀನೇ ಮತ್ತೆ. ಹೊಟ್ಟೆಯೊಳಗೆ ಹೊಸ ಜೀವ ಹೊರಳಾಡ್ತಿರಬೇಕಾದ್ರೆ ಹೊಸಬಿ ಹಾಗೆ ಕಾಣಿಸ್ದೆ ಮತ್ತೇನು?"

ಅವನ ಕೈಯೆತ್ತಿ ತನ್ನ ಹೊಟ್ಟೆಯ ಮೇಲಿಟ್ಟುಕೊಂಡಿದ್ದಳು ನಳಿನಿ. ಹೊಟ್ಟೆಯೊಳಗಿದ್ದ ಮಗು ಈ ಸ್ಪರ್ಶಕ್ಕೆ ಎಚ್ಚರಾಯಿತೆಂಬಂತೆ ಗುಡುಕ್ಕನೆ ಹೊರಳಿ, ಆ ಅನುಭವ ಕರಗಳಿಗೆ ಸುಸ್ಪಷ್ಟವಾಗಿ ವೇದ್ಯವಾಗಿ, ಅನಂತನ ಮೈ ನವಿರೆದ್ದಿತ್ತು. ಬಾಣಂತನಕ್ಕೆ ಹೆಂಡತಿಯನ್ನು ತೌರಿಗೆ ಕಳಿಸುವ ದಿನ ಹತ್ತಿರ ಹತ್ತಿರ ಬರುತ್ತಿದೆ. ಅನಿವಾರ್ಯದ ಒಂಟಿ ಬದುಕು ಸನಿಹದಲ್ಲಿ ಕಾದಿದೆ. ಸಂತಸದ ನಡುವೆಯೂ ಅಗಲಿಕೆಯ ಸಂಕಟ. ಅನಂತ ನಿಟ್ಟುಸಿರಿನೊಂದಿಗೆ ಅದೇ ಹಳೇ ಮಾತನ್ನು ಪುನರುಚ್ಚರಿಸಿದ್ದ, "ಇನ್ನೊಂದೈದಾರು ತಿಂಗಳು ಒಬ್ನೇ ಇರಬೇಕಾಗುತ್ತಲ್ಲೇ. ನೆನೆಸ್ಕೊಳ್ಳೋಕೇ ಕಷ್ಟ ಆಗ್ತಿದೆ..."

ಈ ಸಲ ಹಾಸ್ಯವಾಗಿ ಅವನ ಮಾತನ್ನು ತೇಲಿಸಲಿಲ್ಲ ನಳಿನಿ. ಗಂಭೀರವಾಗಿ ಕೇಳಿದ್ದಳು,

"ನಮ್ಮಪ್ಪ ಬಾಣಂತನಕ್ಕೆ ನನ್ನ ಕರ್ಕೊಂಡ್ಹೋಗ್ತಾರೆ ಅಂತ ನಿಮಗೆ ಗ್ಯಾರಂಟಿ ಇದೆಯಾ?"

ಚಕಿತನಾಗಿದ್ದ ಅನಂತ.

"ಚೊಚ್ಚಲು ಬಾಣಂತನ ತೌರಲ್ಲಿ ಆಗೋದು ವಾಡಿಕೆ ಅಲ್ವಾ? ಇಲ್ಲಿ ಹೆಣ್ಣು ದಿಕ್ಕು ಅಂತ ಮತ್ಯಾರಿದಾರೆ?"

